Legal Advisers appointed to assist Government in Krishna Water Dispute

109. Sri H. N. NANJE GOWDA (Arkalgud).—

Will the Chief Minister be pleased to state :—

(*a*) the name or names of Legal Advisers appointed to assist the Government of Mysore regarding Krishna Water Dispute before the Tribunal ;

(*b*) the remuneration agreed to be paid to them ;

(*c*) the special equipment and knowledge of the persons employed on river water disputes and riparian rights ?

Sri VEERENDRA PATIL (Chief Minister).—

(*a*) *Legal Adviser*
Sri K. G. Datar

Counsels

(1) Sri M. K. Nambyar ;
(2) Sri V. S. Malimath ;
(3) Sri S. S. Javali ;
(4) Sri N. A. Subramanyam.

(*b*) 1. Sri K. G. Datar—Rs. 3,500 p. m.

2. Sri M. K. Nambyar—Rs. 25,000 as reading fee and Rs. 2,500 for every day he is out of Headquarters (Madras) for taking instructions, scrutiny of the statement and arguments before the Krishna and Godavari Waters Disputes Tribunals.

3. Sri V. S. Malimath, Advocate General of Mysore—remuneration not yet fixed.

4. Sri S. S. Javali—Rs. 400 for every day of work connected with Krishna and Godavari Water Disputes.

5. Sri N. A. Subramanyam—Rs. 2,000 reading fee and Rs. 500 for every day he is out of Headquarters (Madras) for taking instructions, scrutiny of the statement.

(*c*) Inter-State River Valley Dispute before a Tribunal have no precedent in India. Therefore persons of long experience and repute in the legal profession have been appointed.

ಶ್ರೀ ಎಚ್. ಎನ್. ನಂಜೇಗೌಡ.—ದೀರ್ಘ ಕಾಲದ ಅನುಭವ ಉಳ್ಳವರನ್ನು ನಾವು ನೇಮಕ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದೀರಿ. ಶ್ರೀ ಕೆ. ಜಿ. ದಾತಾರ್‌ರವರ ಅಡ್ರಸ್ ಕೊಟ್ಟಿಲ್ಲ, ಎಸ್. ಎಸ್. ಜವಳಿಯವರ ಅಡ್ರೆಸ್ ಕೊಟ್ಟಿಲ್ಲ. ನನ್ನ ಇನ್‌ಫರ್ಮೇಷನ್ ಪ್ರಕಾರ ಜವಳಿ ಅನ್ನುವವರು ಹೊಸದಾಗಿ ಲೀಗರ್ ಪ್ರೊಫೆಷನ್‌ಗೆ ಪ್ರವೇಶಮಾಡಿದ್ದಾರೆ, 3-4 ವರ್ಷ ಆಗಿದೆ ಎಂದು ತಿಳಿದುಬಂದಿದೆ, ಇದು ನಿಜವೇ ?

† ಶ್ರೀ ವೀರೇಂದ್ರ ಪಾಟೀಲ್.—ಅವರ ಅಡ್ರೆಸ್ ಕೇಳಿದ್ದಾರೆ ಕೊಡಬಹುದಾಗಿತ್ತು. ಕೆ. ಜಿ. ದಾತಾರ್ ಅನ್ನುವವರು ಬಿಜಾಪುರ ಜಿಲ್ಲೆಯವರು. ಬಾಂಬೆ ಹೈಕೋರ್ಟಿನ ಜಡ್ಜ್‌ರು ಆಗಿದ್ದರು, ಹೈ ಕೋರ್ಟ್ ಜಡ್ಜ್ ಆಗಿ ರಿಟೈರ್ ಆದಮೇಲೆ ಅವರು ಸೆಂಟ್ರಲ್ ಲಾ ಕಮಿಷನ್ ಮೆಂಬರ್ ಆಗಿದ್ದರು, ಇಂಟರ್ ನ್ಯಾಷನಲ್ ಲಾ ಬಗ್ಗೆ ಅವರಿಗೆ ಬಹಳ ಅನುಭವ ಇದೆ, ಅದನ್ನು ನಾವು ಉಪಯೋಗಿಸಿಕೊಳ್ಳಬೇಕೆಂದು ವಿಚಾರ ಮಾಡಿ ಅವರನ್ನು ಲೀಗರ್ ಅಡ್ವೈಸರ್ ಆಗಿ ಅಪಾಯಿಂಟ್ ಮಾಡಿದ್ದೇವೆ. ಅಲ್ಲಿಂದ ಈ ಟ್ರಿಬ್ಯೂನಲ್ ಯಾವಾಗಲೂ ಡೆಲ್ಲಿಯಲ್ಲಿ ನಡೆಯುವುದರಿಂದ ಡೆಲ್ಲಿಯಲ್ಲಿ ನಮ್ಮ ಒಬ್ಬ ರೆಪ್ರಸೆಂಟೇಟೀವ್ ಇರಬೇಕಾಗುತ್ತದೆ. ಜವಳಿ ಅನ್ನುವವರು ಸುಪ್ರೀಂ ಕೋರ್ಟಿನ ಅಡ್ವೊಕೇಟ್ ಇದ್ದಾರೆ, ಅಲ್ಲಯೇ ಪ್ರಾಕ್ಟೀಸ್ ಮಾಡುತ್ತಾ ಇದ್ದಾರೆ ಪ್ರತಿಯೊಂದುನಲವೂ ಇಲ್ಲಿಂದ ನಮ್ಮ ರೆಪ್ರಸೆಂಟೇಟೀವನ್ನು ಅಲ್ಲಿಗೆ ಕಳುಹಿಸುವುದಕ್ಕೆ ಬದಲಾಗಿ ಅಲ್ಲಿಯೇ ನಮ್ಮ ರೆಪ್ರಸೆಂಟೇಟೀವ್ ಇದ್ದಲ್ಲಿ ಪತ್ರವ್ಯವಹಾರಗಳ ಕಾಪಿ ಮುಂತಾದುವುಗಳು ಬರಬೇಕಾಗಿದ್ದರೆ ಅಲ್ಲಿನ ಅಡ್ವೊಕೇಟರೇ ಇರಬೇಕಾದ್ದು ಅವಶ್ಯಕ ಅಂತ ಹೇಳಿ ಅವರನ್ನು ಅಪಾಯಿಂಟ್ ಮಾಡಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಶ್ರೀ ಎಸ್. ಎಸ್. ಜವಳಿ ಅನ್ನುವವರಿಗೆ ಎಷ್ಟು ವರ್ಷದ ಅನುಭವ ಇದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲೇ ಹೇಳಿದ್ದೇವೆ ಯಾರ್ಯಾರನ್ನು ನೇಮಕ ಮಾಡಿದ್ದೇವೆ ಎಂಬುದನ್ನು. ಜವಳಿ ಅನ್ನುವವರು ಸುಪ್ರೀಂ ಕೋರ್ಟಿನ ಅಡ್ವೊಕೇಟ್ ಆಗಿದ್ದಾರೆ, ಎಷ್ಟು ವರ್ಷದಿಂದ ಕೆಲಸ ಮಾಡುತ್ತಾ ಇದ್ದಾರೆ ಎಂಬುದು ಗೊತ್ತಿಲ್ಲ.

ಶ್ರೀ ಎಸ್. ಶಿವಪ್ಪ.—ಕೃಷ್ಣಾ ನೀರಿನ ವಿವಾದದ ಬಗ್ಗೆ ಜ್ಯೂಡಿಬ್ಯುನಲ್ಲಿಗೆ ಸಹಾಯ ಮಾಡಲು ಮೈಸೂರು ಸರ್ಕಾರದವರು ಒಬ್ಬಿಬ್ಬ ಎಕ್ಸ್‌ಪರ್ಟ್ ಲಾಯರನ್ನು ನೇಮಕ ಮಾಡಿಕೊಳ್ಳುವುದನ್ನು ಬಿಟ್ಟು 1, 2, 3, 4, 5 ಜನ ಲಾಯರುಗಳನ್ನು ನೇಮಕ ಮಾಡಿಕೊಂಡು ಬೇಕುಬೇಕಾದವರನ್ನು ಇಟ್ಟುಕೊಳ್ಳುವುದಕ್ಕೆ ಇದೇನು ಧರ್ಮಛತ್ರವೇ ? ಇಷ್ಟು ಜನರನ್ನು ಇಟ್ಟುಕೊಳ್ಳುವುದಕ್ಕೇನು ಕಾರಣ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಎರಡನೇ ಸ್ಟೇಟಿನವರಾದ ಆಂಧ್ರ ಹಾಗೂ ಮಹಾರಾಷ್ಟ್ರ ಸರ್ಕಾರದವರು ಎಷ್ಟೆಷ್ಟು ಜನರನ್ನು ನೇಮಕ ಮಾಡಿಕೊಂಡಿದ್ದಾರೆಂಬುದನ್ನು ನೋಡಿ ಆ ಅಂಕೆಸಂಖ್ಯೆಗೂ ಇದಕ್ಕೂ ಕಂಪೇರ್ ಮಾಡಿಕೊಂಡು ಮಾತನಾಡಿದ್ದರೆ ಆಗ ಇದೇನು ಧರ್ಮರಾಯ ಛತ್ರವೇ ಅಥವಾ ಯಾವ ಛತ್ರ ಎಂಬ ಪ್ರಶ್ನೆ ಏಳುತ್ತಿರಲಿಲ್ಲ.....

ಶ್ರೀ ಪಾಟಾಳ್ ನಾಗರಾಜ್.—ಇದು ಧರ್ಮರಾಯನ ಛತ್ರವಲ್ಲ—ಇದು ತೋಟದಪ್ಪನವರ ಛತ್ರ.....

ಶ್ರೀ ವೀರೇಂದ್ರ ಪಾಟೀಲ್.—ನಾವು ಎಲ್ಲ ಅಂಶಗಳನ್ನೂ ಪರಿಶೀಲನೆ ಮಾಡಿ ಇದನ್ನು ಮಾಡಿದ್ದೇವೆ. ಈ ಸಮಸ್ಯೆಯಾದರೋ ಬಹಳ ದೊಡ್ಡದು. ನಾವು ನಮ್ಮ ರಾಜ್ಯದ ಹಕ್ಕುಭಾದ್ಯತೆಗಳನ್ನು ಕಾಪಾಡಿಕೊಳ್ಳುವುದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಲೇಬೇಕಾಗಿದೆ. ನಾವು ಇದೆಲ್ಲವನ್ನೂ ದೀರ್ಘವಾಗಿ ಆಲೋಚನೆ ಮಾಡದೇ 1—2 ಲಾಯರನ್ನು ಇಟ್ಟುಕೊಂಡು ನಮ್ಮ ಕೆಲಸವನ್ನೇನಾದರೂ ಹಾಳುಮಾಡಿಕೊಂಡಿದ್ದರೆ ಆಗಲೂ ಸಭೆಯವರು ನೀವೇ ಹಾಳು ಮಾಡಿದಿರಿ ಎಂದು ಒಂದು ಆಪಾದನೆ ಮಾಡುವುದಕ್ಕೆ ಅವಕಾಶವಿರುತ್ತಿತ್ತು. ಇದು ಒಂದು ಕೋಟಿ ಜನರ ಹಿತರಕ್ಷಣೆಯನ್ನು ಸಂರಕ್ಷಣೆ ಮಾಡತಕ್ಕ ಪ್ರಶ್ನೆ. ಅಲ್ಲದೆ ಇಡೀ ಭರತಖಂಡದಲ್ಲೇ ಅಂತರರಾಜ್ಯಗಳ ನದೀ ನೀರಿನ ವಿವಾದ ನಡೆಯುತ್ತಿರುವುದು ಇದೇ ಮೊದಲನೆಯದು. ಇದರ ಬಗ್ಗೆ ನಾವು ಬಹಳ ಜಾಗರೂಕರಾಗಿ ವರ್ತಿಸಬೇಕಾಗಿದೆ. ಎರಡನೇ ರಾಜ್ಯದವರಾದ ಆಂಧ್ರ ಮತ್ತು ಮಹಾರಾಷ್ಟ್ರದವರು ಅಲ್ಲಿ ಏನೇನು ವ್ಯವಸ್ಥೆ ಮಾಡಿಕೊಂಡಿದ್ದಾರೆಂಬುದನ್ನು ನೋಡಿ ಇಲ್ಲಿ ನಾವೂ ಸಹಾ ನಮ್ಮ ಭದ್ರತೆಗಾಗಿ ನಮ್ಮ ಹಕ್ಕುಭಾದ್ಯತೆಗಳ ಸಂರಕ್ಷಣೆಗಾಗಿ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡಲೇಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ಸರ್ಕಾರದವರು ನಂಬಿಯಾರರಿಗೆ 25,000ರೂ, ಜವಳಿಯವರಿಗೆ 400ರೂ ಮತ್ತು ಇನ್ನೊಬ್ಬರಿಗೆ 2000ರೂ ಹೀಗೆಲ್ಲ ಕೊಟ್ಟಿರುವುದನ್ನು ನೋಡಿದರೆ ಇಲ್ಲಿ ನಮ್ಮ ಸರ್ಕಾರದಲ್ಲಿ ಕೆಲಸಮಾಡತಕ್ಕ ಸರ್ಕಾರಿ ಪ್ಲೀಡರ್ ಹಾಗೂ ಅಡ್ವಕೇಟರುಗಳಿಗೆ ಅಗೌರವ ಬರುವುದಿಲ್ಲವೇ ? ಅವರು ಬಹಳ ಪೂರ್ ಸ್ಪಿರಿಟ್ ಎಂತ ಭಾವನೆ ಬರುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಹಾಗೆ ಆಗುವುದಕ್ಕೆ ಅವಕಾಶವೂ ಇಲ್ಲ, ಸಾಧ್ಯವೂ ಇಲ್ಲ. ಹಿಂದೆ ಆ ಮಹಾಜನ್ ಕಮಿಷನ್ ಮುಂದೆ ನಮ್ಮ ಕೇಸಿನಲ್ಲಿ ವಾದ ಮಾಡುವುದಕ್ಕೂ ಹೀಗೇ ನಾವು ಈ ತಜ್ಞರನ್ನೇ ಇಟ್ಟುಕೊಂಡಿದ್ದೆವು.....

ಶ್ರೀ ಎಲ್. ಶ್ರೀಕಂಠಯ್ಯ.—ನಮ್ಮ ಮೈಸೂರಿನಲ್ಲಿ ರಾಯರ್ ಇರಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಆ ರೀತಿ ಇಲ್ಲಿ ಇವರು ನಮ್ಮವರು, ಇವರು ಹೊರಗಿನವರು ಅನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆಂಧ್ರದವರು ಅಲ್ಲಿ ಈಗ ಒಬ್ಬ ಎ. ಕೆ. ಸೇನ್ ಎಂಬುವವರನ್ನು ಇಟ್ಟುಕೊಂಡಿದ್ದಾರೆ. ಅಂದರೆ ಅವರಿಗೆ ಅಲ್ಲಿ ತಮ್ಮವರೇ ಆದ ಆಂಧ್ರದವರು ಯಾರೂ ಇರಲಿಲ್ಲ ಎಂದಲ್ಲ. ಅವರಿಗೆ ಬೇಕಾದ್ದು ಮುಖ್ಯವಾಗಿ ಅವರ ಕೇಸನ್ನು ಚೆನ್ನಾಗಿ ವಾದ ಮಾಡಿ ಗೆಲ್ಲತಕ್ಕವರು ಬೇಕು. ಆದ್ದರಿಂದ ಅವರು ಹೊರಗಿನವರನ್ನೇ ಇಟ್ಟುಕೊಂಡಿದ್ದಾರೆ. ನಮ್ಮ ಮೈಸೂರಿನಲ್ಲೂ ಅಷ್ಟೇ. ಇಲ್ಲಿ ಯಾರೂ ವಾದಮಾಡತಕ್ಕವರಿಲ್ಲ ಎಂದಲ್ಲ—ನಮಗೆ ನಮ್ಮ ಕೇಸನ್ನು ಚೆನ್ನಾಗಿ ವಾದ ಮಾಡಲು ಒಬ್ಬ ನಿಪುಣರು ಬೇಕಾಗಿತ್ತು. ನಮ್ಮ ಹಕ್ಕುಭಾದ್ಯತೆಗಳನ್ನು ಕಾಪಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಗೂ ಮುಂಜಾಗರೂಕತೆಗಳನ್ನು ಕೈಕೊಳ್ಳಬೇಕೋ ಅವನ್ನೆಲ್ಲಾ ಮಾಡಿದ್ದೇವೆ. ಆದ್ದರಿಂದ ಇಲ್ಲಿ ಇವರು ನಮ್ಮವರು ಇವರು ಹೊರಗಿನವರು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳುತ್ತೇನೆ.

Sri H. SIDDAVEERAPPA.—Why is not the remuneration of the Advocate-General fixed whereas in the case of others, it is already fixed ?

Sri VEERENDRA PATIL.—Sir, we have not been able to fix the remuneration because I did not have a discussion with him. I propose to have discussion with him and I will see that his remuneration is fixed.

ಶ್ರೀ ಬಿ. ದೊಡ್ಡಬೋರೇಗೌಡ —ಇದಕ್ಕೇನಾದರೂ ಸಮಯ ರಿಸ್ಟ್ರಿಕ್ಷನ್ ಹಾಕಿದ್ದೀರಾ ? ಇಷ್ಟೇ ದಿವಸಗಳಲ್ಲಿ ಅದು ಡಿಸೈಡ್ ಆಗಬೇಕೆಂದು ಕೇಂದ್ರ ಸರ್ಕಾರದವರು ಟ್ರಿಬ್ಯೂನರ್‌ಗೆ ಆದೇಶ ಕೊಟ್ಟಿದ್ದಾರೆಯೇ !

ಶ್ರೀ ವೀರೇಂದ್ರ ಪಾಟೀಲ್.—ನನ್ನ ಮುಂದೆ ಆ ಮಾಹಿತಿ ಇಲ್ಲ. ಬಹುಶಃ ಅದನ್ನು ಇದನ್ನು ಇವತ್ತು ಹೇಳುವುದು ಕಷ್ಟವಾಗುತ್ತದೆ. ಟ್ರಿಬ್ಯೂನರ್ ಬಹಳ ದಿವಸಗಳವರೆಗೂ ಸಮಯ ತೆಗೆದು ಕೊಳ್ಳುವ ಹಾಗೆ ಇಲ್ಲ. ಅವರು ಮೇಲಿಂದಮೇಲೆ ಕುಳಿತು ಅದಷ್ಟು ಬೇಗ್ಗನೆ ಅದನ್ನು ಇತ್ಯರ್ಥ ಮಾಡಬೇಕೆಂದು ಇದ್ದಾರೆ.

Raising the height of Tunga Anicut at Gajanur

161. Sri K. H. SRINIVASA (Sagar).—

Will the Chief Minister be pleased to state :—

(a) whether there is a proposal to raise the height of the Tunga Anicut at Gajanur, Shimoga District, if so, how much ;